Doc-284
1-2-2

(1)

R No KRNN 12 4-6-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57th Year **

'Satyavadi' daily, Mysore 4

ಸ್ಥಾಪಕರು: ಆರಮನೆ ಪಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ವಸುಧೈವ ಕುಟುಂಬಕಂ ಎಂ. ಎಸ್. ಕೃಷ್ಣರಾವ್ (3 ಪ್ರ.ಸ

ಮುಷರಿಸುವರೆಲೆ ನೌಕರರಿಗೆ ಕೆಲಸದಿಂದ ವಜಾ

ಬಂಧನ ಮತ್ತು ಬಿಡುಗಡೆ

ಮದ್ರಾಸಿನ ಸ್ಟೂಡಿಯೋವೊಂದರ ಎದುರು ಅಣ್ಣಾ ಡಿಎಂಕೆ ನಾಯಕ ಶ್ರೀ ಎಂ ಜಿ ರಾಮಚಂದ್ರನ್ ವಿರುದ್ಧ ಪ್ರತಿಭಟನಾ ಪ್ರದರ್ಶನ ನಡೆದ ಸುಮಾರು ೧೯ ನೂರು ಜನರನ್ನು ಬಂಧಿಸಿ ಅನಂತರ ಬಿಡುಗಡೆ ಮಾಡಲಾಯಿತು.

★

ಬಲಾತ್ಕಾರ ರಾಜೀನಾಮೆ

ವಿಶಾಖಪಟ್ಟಣ ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ಆರ್. ಪಿ. ನಾಥ್‌ರನ್ನು ಅವರ ಕಾರಿಗೆ ಬಾಂಬಿನ ಸಾರ್ವಜನಿಕ ರಸ್ತೆಯಲ್ಲಿ ಮುಂಚಿತವಾಡ ವಿದ್ಯಾರ್ಥಿ ಕ್ರಿಯಾ ಸಮಿತಿ ಸದಸ್ಯರು ಸುತ್ತುಗಟ್ಟಿ, ಜಿಲ್ಲಾ ಆಯೋಜನ ಸಮಿತಿಗೆ ಅವರಿಂದ ರಾಜೀನಾಮೆ ಪಡೆದರು

★

ಚಳುವಳಿ ಅಗತ್ಯವಿಲ್ಲ

ನೀರಿನ ಅಭಾವವನ್ನು ಪರಿಹರಿಸುವುದರಲ್ಲಿ ಪುರಸಭೆ ಮತ್ತು ಪಿ ಹೆಚ್ ಇ ವಿಭಾಗ ಕ್ರಮಗಳನ್ನು ಕೈಗೊಂಡಿವೆ. ಪೌರ ಸಭೆ ಕೈಗೊಂಡಿರುವ ಕ್ರಮದಿಂದ ನೀರಿನ ಅಭಾವ ಪರಿಸ್ಥಿತಿ ಹೆಚ್ಚುಮಟ್ಟಿಗೆ ಕಡಿಮೆ ಆಗಿದೆ. ನಿರ್ದಿಷ್ಟ ದೂರುಗಳಿಗೆ ಸಕಾಲ ಗಮನ ಕೊಡಲಾಗುತ್ತಿದೆ ನೀರಿನ ಬಿಕ್ಕಟ್ಟಿನ ಭೀತಿ ಸಾರ್ವಜನಿಕರಲ್ಲಿ ಗಮನಾರ್ಹವಾಗಿ ಕಡಿಮೆ ಆಗುತ್ತಿದೆ ಇನ್ನು ಕೆಲವೇ ದಿನಗಳಲ್ಲಿ ನೀರು ಸರಬರಾಜು ಪರಿಸ್ಥಿತಿಯನ್ನು ಕಾಯ್ದುಕೊಳ್ಳುವುದರಲ್ಲಿ ಅಧಿಕಾರಿಗಳಿಗೆ ತುಂಬಾ ವಿಶ್ವಾಸವಿದೆ. ಆದ್ದರಿಂದ ಯಾರಿಂದಲೇ ಚಳುವಳಿ ಪ್ರದರ್ಶನ ಅಗತ್ಯವಿಲ್ಲ —ಎಂದು **ಮೈಸೂರು ಪುರಸಭೆ ಕಮೀಷನರ್ ಶ್ರೀ ಎಸ್. ಸ್ವತಂತ್ರರಾವ್‌ರವರು** ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

○

★ ರಾಜ್ಯ ರಾಜಕೀಯವನ್ನು ತ್ಯಜಿಸುವುದಿಲ್ಲವೆಂದು ಮಾಜಿ ಮಂತ್ರಿ ಶ್ರೀ ಬಿ. ಬಸವಲಿಂಗಪ್ಪನವರು ಬೆಂಗಳೂರಿನಲ್ಲಿ ತಿಳಿಸಿದರು.

ದೇವರೊಬ್ಬನೆ ಶಾಶ್ವತ

ಈ ಹಿಂದೆಯೂ ದೇವರಿದ್ದ. ಈಗಲೂ ದೇವರಿದ್ದಾನೆ. ಆತನು ಶಾಶ್ವತ ಎಂಬುದರಲ್ಲಿ ಗಾಂಧೀಜಿ ಹೆಚ್ಚಿನ ನಂಬಿಕೆಯನ್ನಿಟ್ಟುಕೊಂಡಿದ್ದರು ದೇವರು ಬ್ರಾಹ್ಮಸ್ವರೂಪಿಯಾಗಿರಬೇಕೆಂಬ ಮಾನವನ ಹೃದಯದಲ್ಲಿದ್ದಾನೆಂದು ಮಹಾತ್ಮರು ನಂಬಿದ್ದರು. ಪ್ರಕೃತಿ ನಿಯಮಗಳಲ್ಲಿ ನಂಬಿಕೆಯಿಲ್ಲದ ಪರಿಪೂರ್ಣವಾದ ಜೀವನ ನಡೆಸಲು ಸಾಧ್ಯವಿಲ್ಲವೆಂಬುದು ಅವರ ಅಭಿಮತವಾಗಿತ್ತು. ದೇವರಲ್ಲಿ ನಂಬಿಕೆಯಿಲ್ಲದ ಮನುಷ್ಯ, ಕಡಲಿನಿಂದ ಪ್ರತ್ಯೇಕಗೊಂಡ ನೀರಿನ ಹನಿಯಂತೆ ವಿಹ್ವಲನಾಗಿ ನಾಶವಾಗುತ್ತಾನೆ ; ದೇವರಲ್ಲಿ, ದೇವರ ಅಸ್ತಿತ್ವದಲ್ಲಿ, ಆತನ ಸಜೀವವಾದ ಶಕ್ತಿಯಲ್ಲಿ ನಮಗೆ ನಂಬಿಕೆ ಇದ್ದಲ್ಲಿ ಅದರಿಂದ ನಮಗೆ ಒಳ್ಳಿತಾಗುತ್ತದೆ. ಸಮಾರ್ಗದಲ್ಲಿ ನಡೆಯುವಂತೆ ನಮ್ಮನ್ನು ಪ್ರೇರಿಸುವ ಶಕ್ತಿಯೇ ದೇವರು ; ಸಜೀವ ವಸ್ತುಗಳ ಸಾರಸತ್ವವೇ ದೇವರು ಎಂದೂ ಗಾಂಧೀಜಿ ನಂಬಿದ್ದರು.

ದೇವರಲ್ಲಿ ಗಾಂಧೀಜಿಗಿದ್ದ ಅಚಲ ವಿಶ್ವಾಸವೇ ಅವರ ಶಕ್ತಿ ಸಾಮರ್ಥ್ಯಗಳಿಗೆ ಮೂಲವಾಗಿತ್ತು ; ದೇವರ ಕೈಯಲ್ಲಿ ತಾವೊಬ್ಬ ಯಃಕಶ್ಚಿತ ವಸ್ತುವೆಂದೂ, ಆತನ ಆದೇಶಗಳ ಮೇರೆಗೆ ನಡೆದುಕೊಳ್ಳುವುದು ತನ್ಮ ಧರ್ಮವೆಂದೂ ಅವರು ಬಗೆದಿದ್ದರು ; ಜೀವನದಲ್ಲಿ ಕ್ಲಿಷ್ಟವಾದ ಪರಿಸ್ಥಿತಿಗಳನ್ನು ಎದುರಿಸಬೇಕಾದಾಗ ದೇವರಲ್ಲಿ ಅವರಿಗಿದ್ದ ನಂಬಿಕೆ, ವಿಶ್ವಾಸ ಮತ್ತಷ್ಟು ದೃಢಗೊಳ್ಳುತ್ತಿತ್ತು. ಸಂಕಷ್ಟಗಳನ್ನು ಎದುರಿಸುತ್ತಿದ್ದಾಗ ದಿಕ್ಕು ತೋಚದಂತಾಗಿ ಬವಣೆ ಪಡುತ್ತಿದ್ದಾಗ ದೇವರು ನನ್ನ ಸಮಾಧಿಯಲ್ಲಿದ್ದು ನನಗೆ ಪೂರ್ಣದರ್ಶನ ನೀಡುತ್ತಿರುವಂತೆ ಭಾಸವಾಗುತ್ತಿತ್ತು ಎಂದು ಗಾಂಧೀಜಿ ಹೇಳಿದ್ದಾರೆ ; ಎಂದೇ ಆಗಲಿ ಯಾವ ಸಂದರ್ಭದಲ್ಲೇ ಆಗಲೀ ದೇವರು ತಮ್ಮ ಕೈ ಬಿಡುವುದಿಲ್ಲವೆಂದು ಅವರು ಹೇಳುತ್ತಿದ್ದರು.

[ಮಹಾತ್ಮಾ ಗಾಂಧಿಯವರ ಸಂದೇಶ]

★

ಬ್ರಾಹ್ಮಣ ಹರಿಜನ ವಿವಾಹ

ಮಡಿಕೇರಿಯ ಅಶ್ವಿನಿ ಗಣಪತಿ ದೇವಾಲಯದಲ್ಲಿ ವಿಶ್ವ ಹಿಂದೂಪರಿಷತ್ ಆಶ್ರಯದಲ್ಲಿ ಜಯಲಕ್ಷ್ಮಿ ಎಂಬ ಬ್ರಾಹ್ಮಣ ಕನ್ಯೆಯೊಡನೆ ಶ್ರೀ ಹೆಚ್. ಆರ್. ಸತ್ಯನಾರಾಯಣ ಎಂಬ ಹರಿಜನ ವರನ ವಿವಾಹ ನಡೆಯಿತು.

★

ಉಗ್ರ ಶಿಕ್ಷೆಗೆ ಅವಕಾಶ

ಆಹಾರ ಕಾಳಸಂತೆಕೋರರಿಗೆ ಉಗ್ರ ಶಿಕ್ಷೆ ವಿಧಿಸಲು ಉತ್ತರ ಪ್ರದೇಶ ಮಾದರಿಯಲ್ಲಿ ಮುಸೂದೆ ತಯಾರಿಸಲಾಗಿರುವದಾಗಿ ಬೆಂಗಳೂರು ವಾರ್ತೆ ತಿಳಿಸುತ್ತದೆ.

★

ಖಂಡನೆ

ಕುಮಾರಸ್ವಾಮಿ ದೇವಾಲಯದಲ್ಲಾದ ಕಳ್ಳತನದ ಬಗ್ಗೆ ಸಮಾಜಸೇವಕ ರೈತನಾದ ತಿಮ್ಮಪ್ಪನವರ ಮೇಲೆ ಪೋಲೀಸರ ಹಿಂಸಾಕೃತ್ಯವು ಸರ್ವ ಪಕ್ಷಗಳ ಸಭೆಯಲ್ಲಿ ಖಂಡಿಸಲ್ಪಟ್ಟಿತು ಎಂದು ಬಳ್ಳಾರಿ ವರದಿಯೊಂದು ತಿಳಿಸುತ್ತದೆ ಈ ಘಟನೆ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಅನುಕೂಲವಾಗುವಂತೆ ಅರ್ಥ ಮಂತ್ರಿ ಶ್ರೀ ಫೋರ್ಡೆ ಯವರು ಮಂತ್ರಿ ಪದವಿಗೆ ರಾಜೀನಾಮೆ ಕೊಡುವಂತೆ ನಿರ್ಣಯಿಸಲಾಯಿತು.

○

ಮುಷ್ಕರ ನಿರ್ಧಾರ

ಮಹಾರಾಷ್ಟ್ರ ಸರ್ಕಾರ ತಮ್ಮ ಕೇಳಿಕೆಗಳನ್ನು ನೆರವೇರಿಸದಿದ್ದರೆ, ಮೂರು ಲಕ್ಷ ಟ್ರಕ್ ಚಾಲಕರು ಜುಲೈ 1 ರಿಂದ ಮುಷ್ಕರಿಸಿ "ಚಕ್ರಜಾಂ" ನಡೆಸುವರೆಂದು ಬೊಂಬಾಯಿ ವಾರ್ತೆ.

★

★ ಭಾಷಾ ಅಲ್ಪ ಸಂಖ್ಯಾತರ ಅಧಿಕಾರಿ ಶ್ರೀಮತಿ ನೀರಾ ಡೋಗ್ರ ಈ ತಿಂಗಳು 8 ಮತ್ತು 9 ನೇ ತಾರೀಖು ಬೆಂಗಳೂರಿನಲ್ಲಿ ಇರುವರು.

ಮುಷ್ಕರಕಾರರಿಗೆ ಎಚ್ಚರಿಕೆ

ರಾಜ್ಯಸಭೆಯಲ್ಲಿ ರೈಲ್ವೆ ಮಂತ್ರಿ ಶ್ರೀ ಎಲ್. ಎನ್. ಮಿಶ್ರರವರು ಮಾತನಾಡುತ್ತಾ, ಬೆದರಿಕೆ ಹಾಕಲಾಗಿರುವ ಅಕ್ರಮ ರೈಲ್ವೆ ಮುಷ್ಕರದಲ್ಲಿ ಭಾಗವಹಿಸುವವರು ಕೆಲಸ ಕಳೆದುಕೊಳ್ಳುವರೆಂದು ತಿಳಿಸಿದರು. ರೈಲ್ವೆ ಕೆಲಸಗಾರರಾಗಿ ಅವರು ಪಡೆಯುತ್ತಿರುವ ಸೌಕರ್ಯಗಳನ್ನು ವಾಪಸು ಪಡೆಯಲಾಗುವದು ಎಂದು ಅವರು ನುಡಿದರು.

●

ಮಹಿಳೆಯ ಮರಣ

ಕಾನ್ಪುರದ ಆಸ್ಪತ್ರೆಯೊಂದರಲ್ಲಿ ಇಪ್ಪತ್ತನಾಲ್ಕು ವರ್ಷ ವಯಸ್ಸಿನ ಮಹಿಳೆಯೊಬ್ಬಳಿಗೆ ರಕ್ತ ಕೊಟ್ಟೊಡನೆ ಅವರು ಮರಣವನ್ನಪ್ಪಿದರು.

★

ಮೊರೇಸ್‌ರ ನಿಧನ

ಇಂಡಿಯನ್ ಎಕ್ಸ್‌ಪ್ರೆಸ್ ಮಾಜಿ ಸಂಪಾದಕ ಫ್ರಾಂಕ್ ಮೊರೇಸ್‌ರವರು ಲಂಡನ್‌ನಲ್ಲಿ ಮೊನ್ನೆ ರಾತ್ರಿ ನಿಧನರಾದರು.

○

ಸಾಕಷ್ಟು ಧಾನ್ಯ ಇದೆ

ಮೈಸೂರು ರಾಜ್ಯದಲ್ಲಿ ಸಾಕಷ್ಟು ಆಹಾರ ಧಾನ್ಯ ದಾಸ್ತಾನು ಇದ್ದು ಕಡೆಯ ಪಕ್ಷ ಅದು ಒಂದುತಿಂಗಳಿಗೆ ಆಗುವದೆಂದು ಗಾಭರಿಗೆ ಅವಕಾಶ ಇಲ್ಲವೆಂದು ಸರ್ಕಾರದ ಪ್ರಮುಖರು ಬೆಂಗಳೂರಿನಲ್ಲಿ ನಿನ್ನೆ ತಿಳಿಸಿದರು.

★ **ರೈಲ್ವೆ ನೌಕರರು ಮುಷ್ಕರದಲ್ಲಿ ಭಾಗವಹಿಸದಿರುವಂತೆ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್ ಮನವಿ ಮಾಡಿಕೊಳ್ಳುವರು.**

★ **ರೈಲ್ವೆ ಕಾರ್ಮಿಕ ನಾಯಕ ಶ್ರೀ ಫರ್ನಾಂಡೀಸರ ದಸ್ತಗಿರಿ ಕುರಿತು ಶ್ರೀಮತಿ ಲೈಲಾ ಕಬೀರ್ ಫರ್ನಾಂಡೀಸರು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿರುವರೆಂದು ನವದೆಹಲಿ ವಾರ್ತೆ.**

ವಿಶ್ವದಲ್ಲೇ ಅತಿ ದೊಡ್ಡ ಶತ್ನಕಂಬಳಿ

ತೆಹರಾನ್— ಇಲ್ಲಿಗೆ ಆಗಮಿಸಿದ ಭಾರತ ಪ್ರಧಾನಿ ಇಂದಿರಾರವರು ಇರಾನಿನ ಐತಿಹಾಸಿಕ ಮತ್ತು ಅತಿ ವರ್ಣರಂಜಿತ ನಗರವಾದ ಇಸ್ಫಹಾನ್‌ನಲ್ಲಿಯ ವೃತ್ತಿ ಶಿಕ್ಷಣಾ ಸಂಸ್ಥೆಗೆ ಭೇಟಿ ಕೊಟ್ಟು, ಅಲ್ಲಿ ತಯಾರಾಗುತ್ತಿರುವ ವಿಶ್ವದಲ್ಲೇ ಅತ್ಯಂತ ದೊಡ್ಡದಾದ ರತ್ನಕಂಬಳಿಯನ್ನು ನೋಡಿದರು ; ಇದನ್ನು 26 ಮಂದಿ ನಿಪುಣರು 3 ವರ್ಷದಿಂದ ತಯಾರಿಸುತ್ತಿರುವರು ; ಮುಗಿಯಲು ಇನ್ನೂ 9 ವರ್ಷ ಕಾಲ ಹಿಡಿಯುವುದಾಗಿದೆ ; ಇದಕ್ಕೆ ರೂ. 1.5 ಕೋಟಿ ಖರ್ಚಾಗುವುದೆಂದಿದೆ ; ಟೆಹರಾನಿನ ಸೆನೇಟ್ ಹಾಲ್‌ಗೆ ಇದನ್ನು ಹಾಸಲಾಗುವುದು

ವುಡ್‌ಲಾಂಡ್ 3 5 74 ರಿಂ

ಅವೋಘ 2 ನೇ ವಾರ

ಉ ಪಾ ನ ನೆ

ಕನ್ನಡ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ : ಆರತಿ ಡಾ|| ಮಣ್ಣೂರ್ ಶಿವರಾಂ ಕೆ. ಎಸ್. ಅಶ್ವತ್ಥ್, ಲೀಲಾವತಿ ಮುಂತಾದವರು ದಿಗ್ದರ್ಶನ : ಎಸ್. ಆರ್. ಪುಟ್ಟಣ್ಣ ಕಣಗಾಲ್

ಅ ಪೆ ರಾ 2 5 74 ರಿಂದ

ಅವೋಘ ಕನ್ನಡ ಚಿತ್ರ ಒಂದು ವಾರ ಮಾತ್ರ

ನಟಸಾರ್ವಭೌಮ ರಾಜಕುಮಾರ್ ಜಯಂತಿ ಅಶ್ವತ್ಥ್ ರಮೇಶ್
ಬಿ ವಿ. ರಾಧ ಜೂಲಕೃಷ್ಣ
ಇವರ ಮಹೋನ್ನತ ಅಭಿನಯದಿಂದ ಕೂಡಿದ

ನಂ ದ ಗೋ ಕು ಲ

ದಿನ 3 ಪ್ರದರ್ಶನಗಳು.

ಅಖಿಲ ಭಾರತ ಜನಪ್ರಿಯ ಸ್ಪರ್ಧೆ

ಪ್ರವೇಶ ಶುಲ್ಕ ಇಲ್ಲ – ನೀವು ಒಂದು ಬಹುಮಾನ ಗಳಿಸಲೇಬೇಕು

ಸಹಾಯಕ್ಕೆ ಮಾದರಿ ಮೊತ್ತ 42

11	16	15
18	14	10
13	12	17

ಮೊದಲನೆ ಬಹುಮಾನ : ವೆಸ್ಪ ಸ್ಕೂಟರ್ ಅಥವಾ ಟೆಲಿವಿಷನ್ ಅಥವಾ ರೆಫ್ರಿಜಿರೇಟರ್. 2 ನೇ ಬಹುಮಾನ : ಒಂದು ಟೇಪ್ ರೆಕಾರ್ಡರ್ ಅಥವಾ ಆಟೋಮ್ಯಾಟಿಕ್ ಕ್ಯಾಮೆರಾ 3 ನೇ ಬಹುಮಾನ : (100) "ಯಾಷಿಕ" ಜಪಾನ್ ಮಾದರಿ 4 ಬಿ ಮತ್ತು "ಆಲ್ ವರ್ಲ್ಡ್ ಟ್ರಾನ್ಸಿಸ್ಟರ್ ಬೆಲೆ ರೂ. 275/- ಇತರ ಅರ್ಧ ಬೆಲೆ ಮೇಲೆ ಪ್ರತಿ ಕುಟುಂಬಕ್ಕೆ ಆಜೀವ ಸದಸ್ಯತ್ವ ಕಾರ್ಡ್.

ಪ್ರೇರಕರ ತೀರ್ಮಾನ ಕಡೆಯದು

ಖಾಲಿ ಚೌಕಗಳಲ್ಲಿ 11 (ಹನ್ನೊಂದು) ರಿಂದ 19 (ಹತ್ತೊಂಬತ್ತು) ರ ವರೆಗೆ ಸಂಖ್ಯೆಗಳನ್ನು ಉಪಯೋಗಿಸಿರಿ. ಅವನ್ನು ಮೇಲಿನಿಂದ ಕೆಳಗೆ, ಅಡ್ಡಲಾಗಿ, ಮೂಲೆಯಿಂದ ಕೂಡಿದಲ್ಲಿ ಮೊತ್ತ 45 (ನಲವತ್ತೈದು) ಆಗಬೇಕು ಒಂದು ಸಂಖ್ಯೆಯನ್ನು ಒಂದು ಬಾರಿ ಮಾತ್ರ ಉಪಯೋಗಿಸಬೇಕು ಪ್ರವೇಶಗಳಿಗೆ ಖಾಲಿ ಕಾಗದ ಮಾತ್ರ ಉಪಯೋಗಿಸಬೇಕು. ಬಹುಮಾನ ಗಳಿಸಿದವರು ಅಂಚೆ ವೆಚ್ಚ, ಪ್ಯಾಕಿಂಗ್ ಮತ್ತು ಲೈಸನ್ಸ್ ಶುಲ್ಕ ಕೊಡಬೇಕು ಇಂಗ್ಲೀಷ್ ಅಥವಾ ಹಿಂದಿಯಲ್ಲಿ ಪ್ರವೇಶಗಳನ್ನು ಕಳುಹಿಸಬೇಕು. ಫಲಿತಾಂಶಕ್ಕಾಗಿ 45 ಪೈಸೆ ಸ್ಟಾಂಪ್ ಕಳುಹಿಸಬೇಕು. ಕಡೇ ತಾರೀಖು 29-5-74 ಫಲಿತಾಂಶ ತಾರೀಖು 31-5-74.

Director – BAJAJ ENTERPRISES
P O Box No. 1264 DELHI-6

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

SHAKTI SUDHA

A Superb Tonic

Contribute Liberally
to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore